# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ** | : | **539** |
| **ಮಾನ್ಯ ಸದಸ್ಯರ ಹೆಸರು** | : | **ಡಾ.ಉಮಾಶ್ರೀ,**<br>**(ನಾಮನಿರ್ದೇಶನ ಹೊಂದಿದವರು)** |
| **ಉತ್ತರಿಸುವ ದಿನಾಂಕ** | : | **11.12.2025** |
| **ಉತ್ತರಿಸುವ ಸಚಿವರು.** | : | **ಗೃಹ ಸಚಿವರು** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳಿಗೆ ಕಡಿವಾಣ ಹಾಕಲು ಹಾಗೂ ಮಹಿಳಾ ಕಾನೂನು ಬಗ್ಗೆ ಅರಿವು ಮೂಡಿಸುವ ಜಾಗೃತಿ ಫಲಕಗಳ ಅಳವಡಿಕೆ ಮತ್ತು ಪ್ರತ್ಯೇಕ App ಮತ್ತು ಸಹಾಯವಾಣಿ ಆರಂಭಿಸಲು ಅನುದಾನ ಕೋರಿ ಪ್ರಸ್ತಾವನೆಯನ್ನು ಹಣಕಾಸು ಇಲಾಖೆಗೆ ಸಲ್ಲಿಸಲಾಗಿದೆಯೇ; | ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳಿಗೆ ಕಡಿವಾಣ ಹಾಕಲು ಹಾಗೂ ಮಹಿಳಾ ಕಾನೂನು ಬಗ್ಗೆ ಅರಿವು ಮೂಡಿಸುವ ಜಾಗೃತಿ ಫಲಕಗಳ ಅಳವಡಿಕೆ ಮತ್ತು ಪ್ರತ್ಯೇಕ App ಆರಂಭಿಸುವ ಪ್ರಸ್ತಾವನೆಯು ಒಳಾಡಳಿತ ಇಲಾಖೆಯ ಮುಂದಿರುವುದಿಲ್ಲ.<br><br>ಮುಂದುವರೆದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯು 2026-27ನೇ ಸಾಲಿನ ಆಯವ್ಯಯ ಅಂದಾಜು ಪ್ರಸ್ತಾವನೆಯಲ್ಲಿ Complaint Management System & Call Center ಆರಂಭಿಸಲು ಅವಶ್ಯವಿರುವ ಅನುದಾನದ ಬಿಡುಗಡೆ ಕುರಿತು ಆರ್ಥಿಕ ಇಲಾಖೆಯನ್ನು ಕೋರಿದ್ದು, ಪರಿಶೀಲನೆಯಲ್ಲಿರುತ್ತದೆ. |
| ಆ) | ಕಳೆದ 2 ವರ್ಷಗಳಲ್ಲಿ ಲೈಂಗಿಕ ಕಿರುಕುಳ ವರದಕ್ಷಿಣೆ ಕಿರುಕುಳ ಹಾಗೂ ಪೋಕ್ಸೋ ಕಾಯ್ದೆಯಡಿ ಎಷ್ಟು ಪ್ರಕರಣಗಳು ದಾಖಲಾಗಿವೆ: ದಾಖಲಾದ ಪ್ರಕರಣಗಳ ವಿರುದ್ಧ ಕಾನೂನು ಕ್ರಮ ಜರುಗಿಸಲಾಗಿದೆಯೇ; | ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ವರದಿಯಾಗಿರುವ ಲೈಂಗಿಕ ಕಿರುಕುಳ, ವರದಕ್ಷಿಣೆ ಕಿರುಕುಳ ಹಾಗೂ ಪೋಕ್ಸೋ ಕಾಯ್ದೆಯಡಿ ದಾಖಲಾದ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿವೆ:<br><br>**ಪ್ರಕರಣ** / **2023** / **2024** / **2025 (15.11.2025)**<br>ಲೈಂಗಿಕ ಕಿರುಕುಳ / 6487 / 6334 / 5124<br>ವರದಕ್ಷಿಣೆ ಸಾವು / 158 / 112 / 102<br>ಪೋಕ್ಸೋ / 3903 / 4078 / 3954<br><br>ದಾಖಲಾದ ಪ್ರಕರಣಗಳಲ್ಲಿ ಕಾನೂನು ರೀತ್ಯ ಕ್ರಮ ಜರುಗಿಸಲಾಗುತ್ತಿದೆ. |
| ಇ) | ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮಹಿಳಾ ಆಯೋಗದ ಕಛೇರಿಯನ್ನು ಸ್ಥಾಪಿಸಲಾಗಿದೆಯೇ: ಇಲ್ಲವಾದಲ್ಲಿ ಯಾವಾಗ ಸ್ಥಾಪಿಸಲಾಗುವುದು. | ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮಹಿಳಾ ಆಯೋಗದ ಕಛೇರಿಯನ್ನು ಸ್ಥಾಪಿಸುವ ಪ್ರಸ್ತಾವನೆ ಇರುವುದಿಲ್ಲ.<br><br>ಆದರೆ, ಎಲ್ಲಾ 31 ಜಿಲ್ಲೆಗಳ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರ ಮುಖಾಂತರ ಆಯೋಗಕ್ಕೆ ಸಂಬಂಧಪಟ್ಟ ದೂರನ್ನು ಸ್ವೀಕರಿಸಿ, ಕ್ರಮ ಕೈಗೊಳ್ಳಲಾಗುತ್ತದೆ. |

| | | |
|---|---|---|
| ಈ) | ಮಹಿಳಾ ಆಯೋಗಕ್ಕೆ ಸರ್ಕಾರವು ಸದಸ್ಯರನ್ನು ನೇಮಿಸಿದೆಯೇ; ಇಲ್ಲದಿದ್ದಲ್ಲಿ, ಯಾವಾಗ ಆ ಸ್ಥಾನಗಳನ್ನು ತುಂಬಲಾಗುವುದು? | ಮಹಿಳಾ ಆಯೋಗಕ್ಕೆ ಸದಸ್ಯರನ್ನು ಇದುವರೆವಿಗೂ ನೇಮಕ ಮಾಡಿರುವುದಿಲ್ಲ. |

ಸಂಖ್ಯೆ: ಹೆಚ್‌ಡಿ 51 ಎಸ್‌ಡಿಎನ್ 2025

**(ಡಾ: ಜಿ.ಪರಮೇಶ್ವರ)**
ಗೃಹ ಸಚಿವರು